ಪರಿಶೀಲಿಸುತ್ತೇವೆ. ಹಿಂದೆ ಅದೇ ಗುಡಿಕೋಟೆಯಲ್ಲಿ ಈ ಘಟನೆಗಳಿಗಿಂತ ಪೂರ್ವದಲ್ಲಿ ರಾಘವೇಂದ್ರರಾಯರ ಅನುಚರರು ಎನ್ನುವಂಥವರ ಬಗ್ಗೆ ಕೂಡ ಕೊಲೆಯಾಗಿತ್ತು. ಇದೂ ಹಾಗೆಯೇ, ಈ ವೈಷಮ್ಯ ಬೆಳೆದಿರುವ ಹಿನ್ನೆಲೆ ಇದೆ. ಆದರೆ, ಈಗಾಗಲೇ ಕೇಸ್ ರಿಜಿಸ್ಟರ್ ಮಾಡಿದ್ದಾರೆ. ಉತ್ತಮವಾಗಿರುವ ನಮ್ಮ ಎಸ್‌ಪಿಯವರು ಅಲ್ಲಿದ್ದಾರೆ. ಕೇಸ್ ಅನ್ನು ರಿಜಿಸ್ಟರ್ ಮಾಡಿದ್ದಾರೆ. ನನಗೆ ಮೌಖಿಕವಾಗಿ ವಿಷಯ ತಿಳಿಸಿದ್ದಾರೆ. ಆದರೆ, ಎಫ್‌ಐಆರ್‌ನಲ್ಲಿ ಕಾಣಿಸಿರುವ ವ್ಯಕ್ತಿಗಳನ್ನು ಬಂಧಿಸಿಲ್ಲ ಎನ್ನುವುದಿದ್ದರೆ, ನಾನು ಅವರ ಜೊತೆ ಮಾತನಾಡಿ, ಸರಿಯಾದ ಮಾಹಿತಿಯನ್ನು ಮಾನ್ಯ ಶಾಸಕರಿಗೆ ಕಳುಹಿಸಿಕೊಡುತ್ತೇನೆ.

ವಿಷಯ :– ಕಲ್ಪತರು ಗ್ರಾಮೀಣ ಬ್ಯಾಂಕ್‌ಗಳಲ್ಲಿ ಲೂಟಿಯಾಗುತ್ತಿರುವ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :– 2 ತಿಂಗಳ ಹಿಂದೆ ಮುಗುವಾಳ, ಹೊಸಕೋಟೆಯಲ್ಲಿ ಕೆಜಿಬಿ ಬ್ಯಾಂಕ್ ಲೂಟಿಯಾಗಿ 25 ಲಕ್ಷ ರೂಪಾಯಿಗಳಷ್ಟು ಹಣ ಹೋಗಿದ್ದು, ನಾವಿಲ್ಲಿ ಸೋಮವಾರ ಮಾತನಾಡಬೇಕಾದರೆ ಕನಕುಂಟೆ ಎಂದು ಹೇಳಿ ವೈಟ್‌ಫೀಲ್ಡ್‌ನಲ್ಲಿ ಒಂದು ಕೆಜಿಬಿ ಬ್ಯಾಂಕ್ ಅನ್ನು ಹಾಗೇ ಅದೇ ಮಾದರಿಯಲ್ಲಿ, ಬಹುಶಃ ಅದೇ ಗ್ಯಾಂಗ್ ಲೂಟಿ ಮಾಡಿ ಅಲ್ಲಿ ಒಂದು 25–30 ಲಕ್ಷ ರೂಪಾಯಿ ನಷ್ಟವಾಗಿದೆ. ನನ್ನ ಕಾನ್‌ಸ್ಟಿಟ್ಯುಯೆನ್ಸಿಯಲ್ಲಿ ಬಿಳಿಗೆರೆ ಎಂದು ಹೇಳಿ ಇದೆ, ಅಲ್ಲಿ 4 ತಿಂಗಳ ಹಿಂದೆ ಎಸ್‌ಬಿಎಂ ಲೂಟಿಯಾಗಿ 11 ಲಕ್ಷ ರೂಪಾಯಿ ನಷ್ಟವಾಗಿತ್ತು. ಬೆಂಗಳೂರಿನ ಆಜೂಬಾಜಿನಲ್ಲಿ ಇವತ್ತು ಗ್ರಾಮೀಣ ಕೆಜಿಬಿಗಳು, ಕಲ್ಪತರು ಗ್ರಾಮೀಣ ಬ್ಯಾಂಕ್‌ಗಳನ್ನು ನೀವು ಹಳ್ಳಿಗಳಲ್ಲಿ ಮಾಡುವುದಕ್ಕೆ ಆಗುವುದೇ ಇಲ್ಲ. ಇಲ್ಲಿ ಸೆಕ್ಯುರಿಟಿ ಇಲ್ಲ. ಎಲ್ಲ ಬ್ಯಾಂಕ್‌ಗಳೂ ಹೀಗೇ ಸಾರಾಸಗಟಾಗಿ ಲೂಟಿಯಾಗುವ ಸ್ಥಿತಿ ನಿರ್ಮಾಣವಾಗಬಾರದು. ಪೋಲೀಸರು ನಿಷ್ಕ್ರಿಯರಾಗಿದ್ದಾರೆ. ಆ 2 ಬ್ಯಾಂಕ್‌ಗಳು, ಮುಗುವಾಳ ಮತ್ತು ಕನಕುಂಟೆ ಬ್ಯಾಂಕ್‌ಗಳನ್ನು ಲೂಟಿ ಮಾಡಿದ್ದಾರೆ, ಐಡೆಂಟಿಕಲ್ ಗ್ಯಾಂಗ್ ಮಾಡಿದ್ದಾರೆ. ಅದನ್ನು ತಕ್ಷಣ ಏನಾದರೂ ತನಿಖೆ ಮಾಡಿಸಿ, ಕ್ರಮ ತೆಗೆದುಕೊಂಡು ಶಾಸನ ಸಭೆಗೆ ಉತ್ತರ ಹೇಳುತ್ತಾರೆಯೇ ? ಎಂದು ನಾನು ತಮ್ಮ ಮೂಲಕ ಸಚಿವರನ್ನು ಕೇಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ :– ಇದೇ ತರಹ ಆಗಿರುವ ಕೆಜಿಬಿ ವಿಚಾರದಲ್ಲಿ ಕಲ್ಪತರು ಗ್ರಾಮೀಣ ಬ್ಯಾಂಕ್ ಅನ್ನು ದರೋಡೆ ಮಾಡಿರುವುದು, ಈಗಾಗಲೇ 2–3 ಪ್ರಕರಣಗಳು

ಬಂದಿವೆ. ಈಗಾಗಲೇ ಪೋಲೀಸರು ಇದನ್ನು ಬಹಳ ಗಂಭೀರವಾಗಿ ತೆಗೆದುಕೊಂಡಿದ್ದಾರೆ. ಈ ದಿವಸ ಸಾಯಂಕಾಲವೇ ಅವರಿಂದ ಮಾಹಿತಿ ತರಿಸಿಕೊಂಡು, ಸಾಯಂಕಾಲ ಸಿಕ್ಕಿದರೆ ನಾಳೆ ಬೆಳಗ್ಗೆಯಾದರೂ ತಮಗೆ ಕೊಡುತ್ತೇನೆ.

ವಿಷಯ :– ಕರ್ನಾಟಕ ಮೂಲಕ ಕೇರಳ ರಾಜ್ಯವನ್ನು ಪ್ರವೇಶ ಮಾಡಲು ಇರುವ ಎರಡು ರಸ್ತೆಗಳನ್ನು ನಿರ್ಲಕ್ಷ್ಯ ಮಾಡಿರುವ ಬಗ್ಗೆ.

ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) :– ವಿರಾಜಪೇಟೆ ಗಡಿ ಭಾಗದಲ್ಲಿದೆ ಎನ್ನವುದು ಎಲ್ಲರಿಗೂ ಗೊತ್ತಿರುವ ವಿಚಾರ. ಅದು ಕೇರಳ ರಾಜ್ಯದ ಸರಹದ್ದಿನಲ್ಲಿದೆ. ಇವತ್ತು ಕರ್ನಾಟಕದ ಮೂಲಕ ಕೇರಳ ರಾಜ್ಯವನ್ನು ಪ್ರವೇಶ ಮಾಡಬೇಕೆಂದರೆ ಮಾಕೊಡಕು ಮೂಲಕ ತಲಚೇರಿಗೆ, ಕುಟ್ಟಾದ ಮೂಲಕ ಮಾನಂದವಾಡಿಗೆ ಹೋಗುವ ವ್ಯವಸ್ಥೆ ಇದೆ. ಬಹಳಷ್ಟು ವರ್ಷಗಳಿಂದ ಈ ಎರಡೂ ರಸ್ತೆಗಳು ರಾಜ್ಯ ಹೆದ್ದಾರಿಗಳಾಗಿದ್ದು, ಈ ಎರಡೂ ರಸ್ತೆಗಳನ್ನು ಬಹಳಷ್ಟು ನಿರ್ಲಕ್ಷ್ಯ ಮಾಡಿದ್ದಾರೆ. ಇವತ್ತು ಏನಾಗಿದೆ ಎಂದರೆ, ಆ ರಸ್ತೆಗಳ ಉದ್ದ ಸುಮಾರು ಮಾಕುಟದಿಂದ ತಲ್ಲಿಚೆರಿಗೆ ಹೋಗಬೇಕಾದ ರಸ್ತೆಯ ಉದ್ದ 26.1 ಕಿಲೋ ಮೀಟರ್ ಇದೆ. ಮತ್ತೊಂದು ರಸ್ತೆಯಾದ ಕುಟ್ಟದಿಂದ ಮಾನಂದವಾಡಿಗೆ ಹೋಗುವ ರಸ್ತೆಯ ಉದ್ದ ಆನೆ ಚೌಕದ ಗೇಟ್‌ನಿಂದ 54.86 ಕಿಲೋ ಮೀಟರ್ ಇದೆ. ಈ ಎರಡು ರಸ್ತೆ, ರಾಜ್ಯ ಹೆದ್ದಾರಿಗಳನ್ನು ಬಹಳಷ್ಟು ನಿರ್ಲಕ್ಷ ಮಾಡಿರುವುದರಿಂದ ಅಲ್ಲಿ ಪ್ರಯಾಣಿಸ ಬೇಕೆಂದರೆ ತುಂಬ ಕಷ್ಟವಾಗುತ್ತದೆ. ಆ ಪ್ರಯಾಣಿಕರು ಎಷ್ಟರ ಮಟ್ಟಿಗೆ ನರಕಸದೃಸವಾದಂಥ ಪ್ರಯಾಣ ಮಾಡುತ್ತಿದ್ದಾರೆಂದರೆ ಹೇಳತೀರದು. ಸನ್ಮಾನ್ಯ ಯಡಿಯೂರಪ್ಪನವರು ಕೇರಳ ರಾಜ್ಯಕ್ಕೆ ಹೋಗುವಂಥ ಸಂದರ್ಭದಲ್ಲಿ ಅಲ್ಲಿಗೆ ಬಂದಿದ್ದರು. ಅವರು ಅಲ್ಲಿಗೆ ಬಂದಾಗ ಈ ಭಾಗದ ಶಾಸಕರು ಯಾರು ಎಂದು ಕೇಳಿದರು. ಆ ಭಾಗದ ಬಿಜೆಪಿ ಶಾಸಕ ಪ್ರತಿನಿಧಿಯಾಗಿ ನಾನು ಅಲ್ಲಿಯೇ ಇದ್ದೆ. ಆದರೆ ಏನಯ್ಯಾ ಇಷ್ಟೊಂದು ಕೆಟ್ಟದಾಗಿ ಈ ರಸ್ತೆಗಳನ್ನು ಇಟ್ಟಿದ್ದಿಯಾ ಇದನ್ನು ಏನಾದರೂ ಸರಿ ಮಾಡುವುದಕ್ಕೆ ಆಗುತ್ತದೆಯೇ ಎಂದು ಕೇಳಿದರು. ಜೊತೆಗೆ ಅವರೇ ಖುದ್ದಾಗಿ ಈ ಬಗ್ಗೆ ಸರ್ಕಾರಕ್ಕೆ ಒಂದು ಪತ್ರವನ್ನು ಬರೆದರು. ಪತ್ರ ಬರೆದರೂ ಆ ಪತ್ರಕ್ಕೂ ಕೂಡ ಸರ್ಕಾರ ಇಲ್ಲಿಯವರೆವಿಗೂ ಅದಕ್ಕೆ ಯಾವುದೇ ರೀತಿಯ ಚಿಂತನೆ ಮಾಡಲಿಲ್ಲ ಮತ್ತು ಅದನ್ನು ಗಂಭೀರವಾಗಿ ಪರಿಗಣಿಸಲಿಲ್ಲ ಎಂದು ನನಗೆ ಬಹಳ ನೋವಾಯಿತು. ಅದರ ಜೊತೆಗೆ ಉದಯ ಟಿವಿ ಯವರು ಈ ಎರಡು ರಸ್ತೆಗಳನ್ನು